Sl. No.	Name of the Sugar factory	Previous season	Current season
Joint Sector :			
21.	Davanagere Sugars	nil	134.86
22.	Gangavathi	nil	nil
	Total		**134.86**
Private Sector :			
23.	Bannari Amman sugars	nil	1.04
24.	Chamundeshwari	nil	470.11
25.	Godavari	nil	1490.00
26.	I.S.R.	nil	263.56
27.	Mahadeshwara	nil	124.20
28.	Siruguppa Sugars (Gowri)	nil	329.74
29.	Siruguppa Sugars (Desanur)-	nil	
30.	Sundari Sugars	-	-
31.	Thungabhadra Sugars	-	-
32.	Ugar Sugar Works	3.34	75.00
33.	Shamnur	-	-
34.	Renuka sugars	-	-
35.	Prabhulingeshwara	-	-
		A-2282.61	**B-6640.13**
	Total	**A+B= 8922.74**	

ಮಡಿಕೇರಿಯ ತಲಕಾವೇರಿ ಕ್ಷೇತ್ರದ ಸುಧಾರಣೆ

3126 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಡಿಕೇರಿಯ ತಲಕಾವೇರಿ ಕ್ಷೇತ್ರವು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅ) ತಲಕಾವೇರಿ ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರ ಯೋಚಿಸಿರುವ ಕಾರ್ಯಯೋಜನೆಗಳ ವಿವರ ನೀಡುವುದು? ಇದಕ್ಕಾಗಿ ಎಷ್ಟು ಹಣ ಮೀಸಲಿಡಲಾಗುವುದು?

ಇ) ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಎಷ್ಟು ಅವಧಿ ಬೇಕಾಗುತ್ತದೆ?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) ಹೌದು

ಆ) ಮಡಿಕೇರಿ ಜಿಲ್ಲೆಯ ತಲಕಾವೇರಿ ಭಾಗಮಂಡಲಗಳ ಅಭಿವೃದ್ಧಿಗಾಗಿ ರೂ. 89.18 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದೆ.

ಇ) ಸಾಧ್ಯವಾದಷ್ಟು ಬೇಗನೆ ಅಭಿವೃದ್ಧಿ ಪಡಿಸಲಾಗುವುದು.

ಲೆವಿ ಸಕ್ಕರೆಗೆ ಹಣ ಬಿಡುಗಡೆ

3127 - ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೆವಿ ಸಕ್ಕರೆಯನ್ನು ನಿಗದಿಪಡಿಸಿದ ಕೂಡಲೆ ಶೇಕಡಾವಾರು ಸಕ್ಕರೆಯ ಬೆಲೆಯನ್ನು ಸರ್ಕಾರ ಕಾರ್ಖಾನೆಗಳಿಗೆ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಇಲ್ಲದಿದ್ದಲ್ಲಿ ದುಡಿಯುವ ಬಂಡವಾಳದ ಬಡ್ಡಿಯನ್ನು ಸರ್ಕಾರ ಕಾರ್ಖಾನೆಗಳಿಗೆ ಪಾವತಿಸುವುದೇ?

ಇ) ಆ ಸಕ್ಕರೆಯ ಗುಣಮಟ್ಟ ಹಾಳಾಗುವ ಸಾಧ್ಯತೆ ಇದ್ದು ಅದರ ನಷ್ಟವನ್ನು ಸರ್ಕಾರ ಭರ್ತಿ ಮಾಡುವುದೇ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ. ಈ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶಾಶ್ವತ ಸಮುದ್ರ ತಡೆಗೋಡೆ ನಿರ್ಮಾಣದ ಪ್ರಸ್ತಾವನೆ

3128 - ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ) : ಮಾನ್ಯ ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಶ್ವತ ಸಮುದ್ರ ತಡೆಗೋಡೆಗೆ ನಿರ್ಮಾಣ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?